# ಪರಿಪೂರ್ಣತೆಯ ಭ್ರಮೆ ಕಳಚುವ ಕಂಬಾರರ ಸಿರಿಸಂಪಿಗೆ

ಎಂ. ಎನ್. ಅರ್ಚನ ತೇಜಸ್ವಿ

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಶೇಷಾದ್ರಿಪುರಂ ಕಾಲೇಜು, ಬೆಂಗಳೂರು.

**Received: 14/12/2024 ; Accepted: 10/01/2025 ; Published: 02/02/2025**

**DOI: https://doi.org/10.5281/zenodo.14788695**

## ABSTRACT:

ಚಂದ್ರಶೇಖರ ಕಂಬಾರರ 'ಸಿರಿಸಂಪಿಗೆ' ಹಾಗು ಗಿರೀಶ್ ಕಾರ್ನಾಡರ 'ನಾಗಮಂಡಲ'–ಈ ಎರಡೂ ಕೃತಿಗಳಿಗೂ ಎ.ಕೆ. ರಾಮಾನುಜನ್ ಅವರು ಹೇಳಿದ ಒಂದು ಜಾನಪದ ಕತೆಯೇ ಆಧಾರ. ನಾಗಮಂಡಲ ಓದಿದ ನನಗೆ, ಇದೇ ಕತೆಯನ್ನು ಕಂಬಾರರು ಹೇಗೆ ಬಳಸಿಕೊಂಡಿದ್ದಾರೆ ಎಂದು ತಿಳಿಯುವ ಕುತೂಹಲವಿತ್ತು.ಕಂಬಾರರು ಈ ಕತೆಯನ್ನು ಕಟ್ಟಿಕೊಡುವ ಪರಿ ಸಂಪೂರ್ಣ ಭಿನ್ನ.

ಜಾನಪದವನ್ನು ಬಹಳ ಶಕ್ತಿಯುತವಾಗಿ ಬಳಸಿಕೊಳ್ಳುವ ಕಂಬಾರರು ಈ ನಾಟಕಕ್ಕೆ ಯಕ್ಷಗಾನ ರಂಗ ಪ್ರಕಾರವನ್ನು ಬಳಸಿಕೊಂಡಿರುವುದು ಇನ್ನೊಂದು ವಿಶೇಷ. ಈ ವಿಶೇಷತೆಯನ್ನು ಮತ್ತಷ್ಟು ವಿವರವಾಗಿ ಅರಿಯುವ ಉದ್ದೇಶವೂ ನನ್ನ ಲೇಖನ ರಚನೆಯ ಹಲವು ಕಾರಣಗಳಲ್ಲಿ ಒಂದು. ಇನ್ನು ನನ್ನ ಸಂಶೋಧನಾ ಲೇಖನದ ಮುಖ್ಯ ಉದ್ದೇಶ, ಇಂದಿಗೂ ಮನುಷ್ಯನನ್ನು ಕಾಡುವ ಹಲವು ಪ್ರಶ್ನೆಗಳಿಗೆ ಕಂಬಾರರ 'ಸಿರಿಸಂಪಿಗೆ' ಉತ್ತರ ನೀಡುತ್ತದೆಯೇ ಎಂದು ಅರಿಯುವ ಅದಮ್ಯ ಆಸಕ್ತಿ. ದೇಹ–ಆತ್ಮ, ಕಾಮ–ಪ್ರೇಮ, ವಾಸ್ತವ–ಆದರ್ಶ ಈ ದ್ವಂದ್ವಗಳು ಮನುಷ್ಯನನ್ನು ತಲ್ಲಣಗಳಿಗೆ ನೂಕುತ್ತಲೇ ಇರುತ್ತವೆ. ಈ ದ್ವಂದ್ವಗಳನ್ನು ಸಿರಿಸಂಪಿಗೆ ಚರ್ಚಿಸಿರುವ ರೀತಿ ಬಹಳ ವಿಶಿಷ್ಟವಾಗಿದೆ. ದೇಹವಿಲ್ಲದೆ ಆತ್ಮವಿಲ್ಲ, ಕಾಮ–ಪ್ರೇಮ ಇವೆರಡೂ, ಒಂದು ಇನ್ನೊಂದಕ್ಕೆ ಪೂರಕವಾಗಬೇಕು ಎನ್ನುವ ಸತ್ಯ ಹಾಗೂ ವಾಸ್ತವ–ಆದರ್ಶಗಳ ನಡುವಿರುವ ಗೆರೆಯನ್ನು ಅರ್ಥ ಮಾಡಿಕೊಳ್ಳಬೇಕಾಗಿರುವ ಅಗತ್ಯ, ಸದಾ ಪರಿಪೂರ್ಣತೆಯೆಡೆಗೆ ತುಡಿಯುವ ನಾವು, ಅದೊಂದು ಭ್ರಮೆಯೆಂಬುದನ್ನು ಮನಗಾಣಬೇಕಾಗಿರುವ ಅವಶ್ಯಕತೆ – ಇವೆಲ್ಲವುಗಳಿಗೆ 'ಸಿರಿಸಂಪಿಗೆ' ಉತ್ತರವೆನಿಸುತ್ತದೆ. ಆ ಉತ್ತರವನ್ನು ಕಂಡುಕೊಳ್ಳುವ, ಕಾಣಿಸುವ ಪ್ರಯತ್ನವೇ ನನ್ನ ಲೇಖನ 'ಪರಿಪೂರ್ಣತೆಯ ಭ್ರಮೆ ಕಳಚುವ ಕಂಬಾರರ ಸಿರಿಸಂಪಿಗೆ.'

## KEYWORDS:

ಸಿರಿಸಂಪಿಗೆ, ಶಿವನಾಗದೇವ, ದೀಪದ ಮೊಲ್ಲೆ, ದೇಹ, ಮನಸ್ಸು, ಆತ್ಮ, ಪರಿಪೂರ್ಣತೆ, ದ್ವಂದ್ವ.

**ಪೀಠಿಕೆ:**

ಸ್ಥಳೀಯ ಸಂಸ್ಕೃತಿಯ ಬೇರುಗಳನ್ನು ಅಂತರ್ಗತ ಮಾಡಿಕೊಂಡಿರುವ ಜಾನಪದ ರಂಗಭೂಮಿ, ನೃತ್ಯ, ಸಂಗೀತ, ಮಹಾಕಾವ್ಯಗಳ ಸಂಯೋಜನೆಯಿಂದ ರೂಪುಗೊಂಡಿದೆ. ಸ್ಥಳೀಯ ಅಸ್ಮಿತೆ ಮತ್ತು ಜೀವನ ಮೌಲ್ಯಗಳನ್ನು ಅದು ತಲೆ–ತಲಾಂತರಗಳವರೆಗೆ ದಾಟಿಸುತ್ತದೆ. ಜಾನಪದ ರಂಗಭೂಮಿಯ ಸಾಧ್ಯತೆಗಳನ್ನು ವಿಸ್ತರಿಸಿದ, ಅವುಗಳಲ್ಲಿ ಹೊಸಕಲ್ಪನೆ, ವಿನ್ಯಾಸ, ದೃಷ್ಠಿಕೋನಗಳನ್ನು ಸೃಷ್ಟಿಸಿದ ಕೀರ್ತಿ ಕಂಬಾರರಿಗೆ ಸಲ್ಲಬೇಕು. ದೇಸೀ ಸತ್ವಗಳನ್ನು ಅವರ ನಾಟಕಗಳು ಬಹಳ ಸಮರ್ಥವಾಗಿ ದುಡಿಸಿಕೊಳ್ಳುತ್ತದೆ. ಕಂಬಾರರ ಪ್ರತಿಭೆಯ ಗಟ್ಟಿತನ, ಅವರ ಪ್ರಜ್ಞೆ–ಅನುಭವಗಳ ಆಳ, ವಿಸ್ತಾರ, ಅಖಂಡತ್ವವನ್ನು ನಾವು ಬೇರೊಬ್ಬರಲ್ಲಿ ಕಾಣಲು ಸಾಧ್ಯವಿಲ್ಲ. ಅವರು ಕನ್ನಡದ ಮಹತ್ವದ ನಾಟಕಕಾರರಲ್ಲಿ ಒಬ್ಬರೆನ್ನುವುದರಲ್ಲಿ ಅನುಮಾನವಿಲ್ಲ. ಜನಪದ ಬದುಕು, ಆ ಬದುಕಿನ ತಲ್ಲಣಗಳಿಗೆ ಕಂಬಾರರು ಅತ್ಯಂತ ತೀವ್ರವಾಗಿ ಗಾಢವಾಗಿ ಅವರು ಸ್ಪಂಧಿಸಿದ್ದಾರೆ. ಅವರ ಜನಪದ ಪ್ರಜ್ಞೆ ಬಹಳ ದಟ್ಟವಾದುದು, ಹಾಗೂ ಅಷ್ಟೇ ದಟ್ಟವಾಗಿ ಅದು ಓದುಗರನ್ನು ಆವರಿಸುವಂತಹದ್ದು.

“ಕಂಬಾರರ ನಾಟಕಗಳಲ್ಲಿ ನಾವು ಕಾಣುವ ಜಾನಪದೀಯತೆ, ಒಂದು ತಂತ್ರ ಮಾತ್ರ ಅಲ್ಲ, ಈ ಜಾನಪದೀಯತೆ (ದೇಸಿತನ) ನಮ್ಮ ಸಂಸ್ಕೃತಿಯ ಪ್ರಾಣಸತ್ವಗಳ ಮಂಡನೆಗೆ, ಸಂಸ್ಕೃತಿಯ ಮುಖಾಮುಖಿ ಹಾಗೂ ಸಂಘರ್ಷಗಳ ಕ್ರಿಯಾಶೀಲ ಅಭಿವ್ಯಕ್ತಿಯ ಭಾಗವಾಗಿ ಪ್ರಕಟಗೊಳ್ಳುವುದು ಅದರ ಗುರಿಯಾಗಿದೆ”.[1]

ದೇಸೀ ಸತ್ವಗಳ ಮೂಲಕ, ಸಮಕಾಲೀನ ಸಮಸ್ಯೆ – ಒತ್ತಡ, ತಲ್ಲಣಗಳಿಗೆ ಉತ್ತರ ನೀಡುವ ಪ್ರಯತ್ನವನ್ನು ಅವರು ಮಾಡುತ್ತಾರೆ. ಮೌಖಿಕ ಪರಂಪರೆಯ ಬಗೆಗೆ ಅಪಾರವಾದ ಪ್ರೀತಿ, ಶ್ರದ್ಧೆ ಹೊಂದಿದ್ದ ಅವರು ನಮ್ಮ ಬದುಕಿಗೆ ಹತ್ತಿರವಾದ ರಂಗಭೂಮಿ ನಮ್ಮಲ್ಲೆ ಇರುವಾಗ ಪಶ್ಚಿಮದ ರಂಗಭಾಷೆಯಲ್ಲಿ ನಮ್ಮ ಭಾವ, ದರ್ಶನಗಳನ್ನು ಹೇಳಲು ಪ್ರಯತ್ನಿಸುವುದು ಹಾಸ್ಯಾಸ್ಪದವೆಂದು ಭಾವಿಸುತ್ತಾರೆ. ಬಯಲಾಟ, ಯಕ್ಷಗಾನಗಳಂತಹ ರಂಗಪ್ರಕಾರಗಳಲ್ಲಿ ಅವರ ಸೃಜನಶೀಲತೆ ಕೆಲಸ ಮಾಡಿದೆ. ಲೌಖಿಕ–ಅಲೌಖಿಕ, ಮೂರ್ತ–ಅಮೂರ್ತ, ಈ ಎಲ್ಲಾ ಸ್ತರಗಳಲ್ಲೂ ಅವರ ನಾಟಕಗಳು ಆವರಿಸಿಕೊಳ್ಳುತ್ತಾ ಹೋಗುತ್ತದೆ.

**ಸಿರಿಸಂಪಿಗೆ:**

ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪಡೆದಿರುವ 'ಸಿರಿಸಂಪಿಗೆ'– ಕಂಬಾರರ ಮಹತ್ವದ ಕೃತಿಗಳಲ್ಲಿ ಒಂದು. ಹಲವು ವರ್ಷಗಳ ಹಿಂದೆ ಪ್ರೊ. ಎ.ಕೆ. ರಾಮಾನುಜನ್ ಅವರು ಹೇಳಿದ ಕತೆಯೇ ಕಾರ್ನಾಡರ ನಾಗಮಂಡಲ, ಕಂಬಾರರ ಸಿರಿಸಂಪಿಗೆ ರಚನೆಗೆ ಪ್ರೇರಣೆಯಾಯಿತು. ಈ ಪ್ರೇರಣೆಗೆ ಕಂಬಾರರ ತಂದೆ, ಹಳ್ಳಿಯ ಕಥೆಗಾರರು

ಹೇಳಿದ ಪೂರಕ ಕಥೆಗಳೂ ಸೇರಿ, ಒಂದು 'ದರ್ಶನ' ರೂಪದಲ್ಲಿ 'ಸಿರಿಸಂಪಿಗೆ' ಮೂಡಿ ಬಂದಿತು. ಯಕ್ಷಗಾನದ ರಂಗ ಪ್ರಕಾರವನ್ನು ಇದಕ್ಕೆ ಬಳಸಿಕೊಳ್ಳಲಾಗಿದೆ. ಪಾರಂಪರಿಕ ಜನಪದ ರೂಪಕಗಳನ್ನು ಆಧುನಿಕ ರಂಗಭೂಮಿಗೆ ಅಳವಡಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಯಕ್ಷಗಾನದಲ್ಲಿ ಕಥನ, ಅಭಿನಯ, ನೃತ್ಯ, ಸಂಗೀತಗಳ ಜೋಡಣೆಯಿಂದಾಗಿ, ವಾಸ್ತವ ಮಾರ್ಗದ ಏಕತಾನತೆಯಿಂದ ಪಾರಾಗಲು ಸಾಧ್ಯವಾಗುತ್ತದೆ. ಇದೇ 'ಸಿರಿಸಂಪಿಗೆ' ನಾಟಕಕ್ಕೆ ಗಟ್ಟಿಯಾದ ಭಿತ್ತಿ ಒದಗಿಸಿದೆ. ದೇಹ–ಆತ್ಮಗಳ ಅಭಿನ್ನತೆ, ಹೆಣ್ಣು–ಗಂಡುಗಳ ಸಂಬಂಧ, ಪ್ರಕೃತಿ–ಮನುಷ್ಯ–ದೈವ ಸಂಬಂಧಗಳು, ಮನುಷ್ಯನನ್ನು ಮೂಲಭೂತವಾಗಿ ಕಾಡುವ ಕಾಮ, ಅದರ ಸುಳಿಯಲ್ಲಿ ಸಿಲುಕುವ ಆತನ ದುರಂತ–ಇವೆಲ್ಲವುಗಳ ಒಟ್ಟುರೂಪವೇ 'ಸಿರಿಸಂಪಿಗೆ' ಮನುಷ್ಯನ ಅಸ್ತಿತ್ವದ ಸಮಸ್ಯೆಗಳನ್ನು ಇದು ಚರ್ಚಿಸುತ್ತದೆಯಲ್ಲದೆ, ಉತ್ತರ ಹುಡುಕುವ ಪ್ರಯತ್ನವನ್ನೂ ಮಾಡುತ್ತದೆ..

ಶಿವಾಪುರದ ಅರಸನಾದ ನಾಗನಾಯಕನು ಅಕಾಲದಲ್ಲಿ ಮರಣ ಹೊಂದಿದ ಮೇಲೆ, ಅವನ ಧರ್ಮಪತ್ನಿ ಮಾಯಾವತಿ ರಾಜ್ಯಭಾರ ಮಾಡುತ್ತಿದ್ದಾಳೆ. ರಾಜಕುಮಾರ ಶಿವನಾಗದೇವ ಎಲ್ಲ ವಿದ್ಯೆಗಳಲ್ಲೂ ಪರಿಣಿತನಾಗಿದ್ದಾನೆ. ಶೌರ್ಯ, ಧೈರ್ಯ ಸದ್ಗುಣಗಳಿಗೆ ಒಡೆಯನಾದ ಆತ ಈಗ ನಾಡಿಗೆ ಸ್ವಾಮಿಯಾಗಲು ತಕ್ಕವನಾಗಿದ್ದಾನೆ. ಆದರೆ ಇಲ್ಲೊಂದು ಸಮಸ್ಯೆ ಎದುರಾಗುತ್ತದೆ. ಒಂದು ಹುಣ್ಣಿಮೆಯ ದಿನ ಕುಲದೇವರು ಅವತರಿಸಿ ಕಾರಣಿಕ ನುಡಿಯುತ್ತಾರೆ. ಶಿವನಾಗದೇವನಿಗೆ ಸ್ವರಭಂಗವಾದಾಗ ಸಂನ್ಯಾಸ ಯೋಗವಿದೆ. ತಪ್ಪಿದರೆ ಭಾಗಾದಿಯ ಕಾರಣದಿಂದ ಮರಣವಿದೆ. ಪುಷ್ಪರಾಜನ ಪುತ್ರಿ ಸಿರಿಸಂಪಿಗೆಯನ್ನು ಶಿವನಾಗದೇವನಿಗೆ ವಿವಾಹ ಮಾಡಲು ಮಾಯಾವತಿ ಪ್ರಯತ್ನಿಸುತ್ತಾಳೆ. ಆರಂಭದಲ್ಲಿ ವಿವಾಹವನ್ನೇ ನಿರಾಕರಿಸುವ ರಾಜಕುಮಾರ, ನಂತರದಲ್ಲಿ ಕೊರತೆಯಿಲ್ಲದ ಹೆಣ್ಣನ್ನು ಮದುವೆಯಾಗಲು ಬಯಸುತ್ತಾನೆ. ಅಂತಹ ಕನ್ಯೆ ಬೇಕೆಂದರೆ ನೀನೇ ನಿನ್ನ ಹೆಂಡತಿಯಾಗಬೇಕಷ್ಟೆ ಎನ್ನುತ್ತಾಳೆ ತಾಯಿ. ಶಿವನಾಗದೇವ ಸ್ವಮೋಹ ಕೇಂದ್ರಿತ ರಾಜಕುಮಾರನೆಂಬುದು ಇಲ್ಲಿ ಸ್ಪಷ್ಟವಾಗುತ್ತದೆ. ಒಂದು ರಾತ್ರಿ ಶಿವನಾಗದೇವ ತನ್ನ ಅರೆನಿದ್ರೆ, ಅರೆ ಎಚ್ಚರದ ಸ್ಥಿತಿಯಲ್ಲಿ ದೀಪದ ಮೊಲ್ಲೆಯನ್ನು ನೋಡುತ್ತಾನೆ. ಆಕೆ ಸೌಂದರ್ಯ, ಪ್ರೇಮ, ಆದರ್ಶಗಳ ಮೂರ್ತಿರೂಪವಾಗಿ ಅವನಿಗೆ ಕಾಣುತ್ತಾಳೆ. ಶಿವನಾಗದೇವನಲ್ಲಿ ಹರುಷ ಉಕ್ಕಿಸುವ ಅವಳು, ನಿಧಾನವಾಗಿ ನರ್ತಿಸುತ್ತಾ ಅವನಲ್ಲೆ ಐಕ್ಯವಾಗಿಬಿಡುತ್ತಾಳೆ.

"ನಾಟಕ ಬೆಳೆದಂತೆ ದೀಪದ ಮೊಲ್ಲೆ ಇನ್ನಾರೂ ಆಗಿರದೆ ಅವನ ಚೈತನ್ಯವೇ ಆಗಿರುತ್ತದೆ. ನಾಟಕದ ಕ್ರಿಯೆ ಮುಂದುವರೆದಂತೆ ಇದು ಖಚಿತವಾಗಿ, ವಿವಿಧ ವಿನ್ಯಾಸಗಳಲ್ಲಿ ಪ್ರಕಟಗೊಳ್ಳುತ್ತಾ ಹೋಗುತ್ತದೆ"[2]

ದೀಪದ ಮೊಲ್ಲೆಯೇ ತಾನು ಬಯಸುವ ಹೆಣ್ಣು ಎಂದು ತಿಳಿದುಕೊಂಡ ಶಿವನಾಗದೇವ ಅವಳನ್ನು ಪಡೆಯುವ ಉಪಾಯವನ್ನು ಕಂಡುಕೊಳ್ಳುತ್ತಾನೆ. ಕುಲದೇವರ ಸಾಕ್ಷಿಯಾಗಿ ಖಡ್ಗದಿಂದ ಅವನ ದೇಹವನ್ನು ಎರಡು ಭಾಗವಾಗಿ ಸೀಳಿ, ಎರಡೂ ಭಾಗಗಳನ್ನೂ ಒಂದೊಂದು ಮಡಿಕೆಯಲ್ಲಿ ತುಂಬಬೇಕು ಎರಡೂ ಮಡಿಕೆಗಳನ್ನು ಹೂವಿನಲ್ಲಿ ಹೂಳಬೇಕು. ಬರುವ ಹುಣ್ಣಿಮೆಯ ದಿನ ಎರಡು ಮಡಿಕೆಗಳನ್ನು ತೆರೆದು ನೋಡಿದರೆ ಒಂದರಿಂದ ರಾಜಕುಮಾರ, ಮತ್ತೊಂದರಿಂದ ದೀಪದ ಮೊಲ್ಲೆ ಬರುತ್ತಾಳೆ. ಆದರೆ ಮುಂದೆ ಶಿವನಾಗದೇವನ ನಿರೀಕ್ಷೆ ಸುಳ್ಳಾಗಿ ಮಡಿಕೆಗಳಿಂದ ಅರ್ಧಭಾಗಗಳ ದೇಹವು ಒಂದು ರಾಜಕುಮಾರನ ದೇಹವನ್ನು ಪಡೆದರೆ, ಇನ್ನೊಂದು ಸರ್ಪವಾಗಿ ಕಾಳಿಂಗನ ದೇಹವನ್ನು ಪಡೆಯುತ್ತದೆ. ನಿರಾಶನಾದ ರಾಜಕುಮಾರ ದೀಪದ ಮೊಲ್ಲೆಯನ್ನೇ ಕನವರಿಸುತ್ತಾ ಸಿರಿಸಂಪಿಗೆಯನ್ನು ಮದುವೆಯಾಗುತ್ತಾನೆ. ಇಲ್ಲಿ ಶಿವನಾಗದೇವ ಮನಸ್ಸಿನ ಸಂಕೇತವಾದರೆ, ಕಾಳಿಂಗ ದೇಹದ ಸಂಕೇತ. ದೇಹದ ಮೂಲಕ ಮನಸ್ಸನ್ನು, ಮನಸ್ಸಿನ ಮೂಲಕ ದೇಹವನ್ನು ಅರಿಯಲು ಪ್ರಯತ್ನಿಸುವ ರಾಜಕುಮಾರ ಸಿರಿಸಂಪಿಗೆಗೆ ಒಲಿಯಲಿಲ್ಲ. 'ನಿನ್ನ ಕಣ್ಣಲ್ಲಿ ದೀಪದ ಮೊಲ್ಲೆ ಇಲ್ಲ ದೇವಿ' ಎಂದು ಬಿಡುತ್ತಾನೆ. ಅವನ ದ್ವಂದ್ವ, ಹೋರಾಟ, ದೀಪದ ಮೊಲ್ಲೆಯ ಹುಡುಕಾಟ ಮುಂದುವರೆಯುತ್ತದೆ. ಶಿವನಾಗದೇವ ಮತ್ತು ಸಿರಿಸಂಪಿಗೆಯ ದಾಂಪತ್ಯಕ್ಕೆ ಸಂವಾದಿಯಾಗಿ ಕತೆಯಲ್ಲಿ ಅವಳಿ-ಜವಳಿ ಮತ್ತು ಕಮಲಳ ಕತೆ ಬರುತ್ತದೆ. ರಾಜಕುಮಾರನ ಕತೆ ಗಂಭೀರ ನೆಲೆಯಿಂದ ಹೊರಟಿದ್ದಾದರೆ, ಅವಳಿ-ಜವಳಿಯ ಕತೆ ಹಾಸ್ಯ ನೆಲೆಯಿಂದ ಹೊರಟಿದ್ದು. ಅರಮನೆಯ ವಿದೂಷಕರಾದ ಇಬ್ಬರಲ್ಲಿ ಕಮಲ ಬಲಾಢ್ಯನಾದ ಜವಳಿಯನ್ನು ಒಪ್ಪಿ ಮದುವೆಯಾಗುತ್ತಾಳೆ. ಆದರೆ ರಾಜಕುಮಾರನಂತೆ ದ್ವಂದ್ವ ಹೋರಾಟ ನಡೆಸುವ ಜವಳಿಗೆ ಕಮಲಳ ಕಣ್ಣಲ್ಲಿ ಸದಾ ಅವಳಿಯೇ ಕಾಣಲು ಶುರುವಾಗಿ, ಅವನೂ ಕಮಲಳಿಂದ ವಿಮುಖನಾಗುತ್ತಾನೆ. ಸಿರಿಸಂಪಿಗೆಯಂತೆಯೇ ಮದುವೆಯಾದರೂ ಪತಿಯ ಪ್ರೀತಿ ಸಿಗದೆ ಕಮಲ ಒದ್ದಾಡುತ್ತಾಳೆ. ಊರಾಚೆಯಲ್ಲಿರುವ ಹುತ್ತದ ಅರಳು ಮಲ್ಲಿಗೆಯ ಹೂವನ್ನು ಕಿತ್ತು ಗಂಡನಿಗೆ ಮಾಲೆ ಮಾಡಿ ಹಾಕಿದರೆ, ಅವನು ಸರ್ಪವಾಗಿ ಬಂದು ಸೇರಿದರೆ, ಸಂತಾನ ಪ್ರಾಪ್ತಿಯಾಗುತ್ತದೆಂಬ ಕುಲದೇವರ ಮಾತನ್ನು ನಂಬಿ ಅದರಂತೆಯೇ ನಡೆಯುತ್ತಾಳೆ. ಶಿವನಾಗದೇವನ ದೇಹದ ಅರ್ಧಭಾಗ ಕಾಳಿಂಗನಾದಂತೆಯೇ ಜವಳಿ ಸರ್ಪದ ರೂಪ ತಾಳುತ್ತಾನೆ. ಮನುಷ್ಯನನ್ನು ಕಾಡುವ ಕಾಮ, ಪ್ರಾಣಿಯ ಅವಸ್ಥೆಗಳನ್ನು ಇದು ಪ್ರತಿನಿಧಿಸುತ್ತದೆ. ಕಮಲಳಿಗೆ ಗಂಡನಿಂದ ದೈಹಿಕ ಸುಖ ದೊರೆತರೂ, ಪ್ರೇಮ ದೊರೆಯಲಿಲ್ಲ. ಸರ್ಪವಾದ ಅವಳಿ ಅಸಹನೆಯಿಂದ ಜವಳಿಯನ್ನು ಕೊಲ್ಲುವುದಲ್ಲದೇ ಕಮಲಳ ಸಂತಾನವನ್ನು ನಾಶ ಮಾಡುತ್ತಾನೆ. ಕೋಪಗೊಂಡ ಕಮಲ ತನ್ನ ಸಂತಾನವನ್ನು ನಾಶಮಾಡಿದ ಅವಳಿಯ ಮೇಲೆ ತನ್ನ ಎರಡೂ ಮೊಲೆಗಳನ್ನು ಎಸೆದು ಕಾಡಿನಲ್ಲಿ ಕಣ್ಮರೆಯಾಗುತ್ತಾಳೆ. ಇದು

ಅವಳ ಹೆಣ್ತನದ ಪ್ರತಿಭಟನೆ.

ಇತ್ತ ಸಿರಿಸಂಪಿಗೆಯನ್ನು ಗುಪ್ತವಾಗಿ ಸೇರುವ ಕಾಳಿಂಗ, ಕಾಮದ ಸಂಕೇತವಷ್ಟೇ ಅಲ್ಲ, ಸಿರಿಸಂಪಿಗೆಯ ಪ್ರೀತಿಗಾಗಿ ಹಂಬಲಿಸುವವನಾಗಿಯೂ ಕಾಣುತ್ತದೆ. ಕಾಳಿಂಗನಿಂದ ಗರ್ಭ ಧರಿಸುವ ಸಿರಿಸಂಪಿಗೆಯನ್ನು ರಾಜಕುಮಾರ ಅನುಮಾನಿಸುತ್ತಾನೆ. ಊರಿನ ಹಿರಿಯರ ಸಮಸ್ತರ ಮುಂದೆ ಸಿರಿಸಂಪಿಗೆ 'ದಿವ್ಯ' ಮಾಡಬೇಕೆಂದು ಶಿವನಾಗದೇವ ಒತ್ತಾಯಿಸುತ್ತಾನೆ. ಆದರೆ ಹುತ್ತದಿಂದ ಹೊರಬಂದ ಸರ್ಪ ಸಿರಿಸಂಪಿಗೆಯ ಗರ್ಭವನ್ನು ತಟ್ಟಿ ಹರಸುತ್ತದೆ. ಅನಿರೀಕ್ಷಿತವಾದ ಈ ಸಂಗತಿಗಳಿಂದ ಗೊಂದಲಕ್ಕೊಳಗಾದ ಶಿವನಾಗದೇವ ಸರ್ಪವನ್ನು ಅನುಮಾನಿಸುತ್ತಾನೆ. ಮಗುವಿನ ಜನನವಾದ ನಂತರ ಸಿರಿಸಂಪಿಗೆ ಕಾಳಿಂಗನ ನಡುವೆ ನಡೆಯುವ ಸಂಭಾಷಣೆಯ ಸಂದರ್ಭದಲ್ಲಿ ಶಿವನಾಗದೇವ ಸೇಡಿನ ರೂಪವಾಗುತ್ತಾನೆ. ಸಿರಿಸಂಪಿಗೆ ಸತ್ಯವನ್ನು ಹೇಳಲಾಗಿ, ಮುಂದೆ ರಾಜಕುಮಾರ ಕಾಳಿಂಗನ ನಡುವೆ ಭಯಂಕರ ಯುದ್ಧವಾಗುತ್ತದೆ. ದೈಹಿಕವಾಗಿ ಕಾಳಿಂಗ ಬಲಶಾಲಿಯಾದರೂ ಕಡೆಗೆ ನಾಗನು ಕರುಳು ನೋಯಲು ಕಡಿಮೆಯಾದನು ಎದುರು ಬಲದಲಿ ಜಡಿದು ಕೊಂದನು ರಾಜ ಗುಡುಗುತ ಒಡಲ ತುಳಿಯುತಲಿ'' ಕಾಳಿಂಗನನ್ನು ಯುದ್ಧದಲ್ಲಿ ಸೋಲಿಸಿದರೂ ಶಿವನಾಗದೇವನ ಶಕ್ತಿ ಹಂತ-ಹಂತವಾಗಿ ಕುಗ್ಗುತ್ತಾ ಬರುತ್ತದೆ. 'ಅನುಜ ಸತ್ತಾಗಿವನೂ ಸಾಯುವನು'ಎಂಬ ಮಾತು ನಿಜವಾಗುವಂತೆ ತನ್ನ ದೇಹದ ಅರ್ಧಭಾಗವು ಕಾಳಿಂಗನಾಗಿ ಹೊರಬಂದ ಸತ್ಯ ಆಗ ಅವನಿಗೆ ಅರಿವಾಗುತ್ತದೆ. ಸಿರಿಸಂಪಿಗೆ ದೈಹಿಕ ಸುಖವನ್ನು ಹೊಂದಿದ್ದು, ಸಂತಾನವನ್ನು ಪಡೆದದ್ದು ತನ್ನದೇ ದೇಹದ ಇನ್ನರ್ಧ ಭಾಗವಾದ ಕಾಳಿಂಗನೊಂದಿಗೆ, ಕಾಳಿಂಗ ಪರಪುರುಷನಲ್ಲ ಎಂಬುದು ಅವನಿಗೆ ಸ್ಪಷ್ಟವಾಗುತ್ತದೆ. ಕಾಳಿಂಗ ತನ್ನ ದೇಹವಾದ, ನಾನವನ ಮನಸ್ಸಾದೆ. ಸಿರಿಸಂಪಿಗೆ ತನ್ನ ದೇಹಕ್ಕೆ ಗರ್ಭವತಿಯಾದಳು ಎಂಬ ಅರಿವಾದೊಡನೆ ಸಿರಿಸಂಪಿಗೆಯನ್ನು 'ಮಹಾರಾಣಿ' ಎಂದು ಸಂಭೋಧಿಸುತ್ತಾನೆ. 'ನಮ್ಮ ರಾಜಕುಮಾರ' ಎನ್ನುತ್ತಾನೆ. ಸೀಳಿಕೊಳ್ಳುವಿಕೆಯ ಪರಂಪರೆಯು ಕೊನೆಯಾಗಲೆಂಬ ಹಾರೈಕೆಯೊಂದಿಗೆ- 'ನಮ್ಮ ಮಗ ಸೀಳಿಕೊಳ್ಳದ ಹಾಗೆ ನೋಡಿಕೋ'[3] ಎಂಬುದು ಸಿರಿಸಂಪಿಗೆಗೆ ಶಿವನಾಗದೇವನ ಕೊನೆಯ ಎಚ್ಚರಿಕೆಯಾಗುತ್ತದೆ. ಸೀಳಿಕೊಳ್ಳುವಿಕೆಯ ತಪ್ಪು ಪಶ್ಚಾತ್ತಾಪದಲ್ಲಿ ಪೂರ್ಣವಾಗಿದೆ.

'ಸಿರಿಸಂಪಿಗೆ'ಯ ವಸ್ತು ಜಾನಪದ ಮೂಲಗಳಲ್ಲಿ ದೊರೆತದ್ದಾದರೂ, ಗ್ರೀಕ್‌ನ ನಾರ್ಸಿಸಸ್ ಕತೆಯ ಮುಂದುವರೆದ ರೂಪದಂತೆ ತೋರುತ್ತದೆ. ದೇಹ-ಮನಸ್ಸು, ಕಾಮ-ಪ್ರೇಮ, ಪೂರ್ಣ-ಅಪೂರ್ಣ, ಬಿಂಬ-ಪ್ರತಿಬಿಂಬಗಳ ದ್ವಂದ್ವವೇ ನಾಟಕದ ಒಟ್ಟು ಹೂರಣ. ಕೊರತೆಯಿಲ್ಲದ ಹೆಣ್ಣನ್ನು ಅರಸುವ ಶಿವನಾಗದೇವ, ಕೊರತೆಯಿಲ್ಲದ ಹೆಣ್ಣು ದೀಪದ ಮೊಲ್ಲೆಯನ್ನು ಕಂಡುಕೊಳ್ಳುವುದು ತನ್ನೊಳಗಿನ ಚೈತನ್ಯದ ಮೂಲಕವೇ. ಪರಿಪೂರ್ಣತೆಯೆಂಬುದೊಂದು ಭ್ರಮೆ ಎಂಬ ಕಟುವಾಸ್ತವವನ್ನು

ನಾಟಕ ಇಲ್ಲಿ ಮನದಟ್ಟು ಮಾಡುತ್ತದೆ. ನಮ್ಮಲ್ಲಿ ನಾವು ಕೊರತೆಯನ್ನು ಕಾಣುವುದೇ ಇಲ್ಲ. ನಮ್ಮನ್ನು ನಾವು ಪ್ರೀತಿಸಿಕೊಳ್ಳುವಷ್ಟು ಬೇರೆಯವರನ್ನು ಪ್ರೀತಿಸಲಾರೆವು. ನಮಗೆ ನಾವು ಪರಿಪೂರ್ಣ. ಈ ಮಾತು ಎಷ್ಟು ಸತ್ಯವೋ "ಪರಿಪೂರ್ಣತೆ" ಎಂಬುದು ಜಗತ್ತಿನಲ್ಲಿ ಇಲ್ಲವೆಂಬುದೂ ಅಷ್ಟೇ ಸತ್ಯ. ಅದೊಂದು ಮಾನಸಿಕ ಸ್ಥಿತಿಯಷ್ಟೆ. ಅದು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನ. ಇವನ್ನೊಪ್ಪದ ಶಿವನಾಗದೇವ, ಅಖಂಡವಾಗಿದ್ದ ತನ್ನನ್ನು ತಾನು ಸೀಳಿಕೊಳ್ಳುವ ಮೂರ್ಖತನದ ಕೆಲಸ ಮಾಡುತ್ತಾನೆ. ತನ್ನೊಳಗಿನ ದೀಪದ ಮೊಲ್ಲೆಯನ್ನು ಪಡೆಯಲು ಬಯಸುವ ಅವನ ಪ್ರೀತಿಗೆ ಒಂದು ಚೌಕಟ್ಟಿಲ್ಲ. ನೀರಿನಲ್ಲಿರುವ ತನ್ನದೇ ಪ್ರತಿಬಿಂಬವನ್ನು ಬಿಂಬವೆಂದು ಭ್ರಮಿಸಿ, ಬೊಗಸೆಯಲ್ಲಿ ಹಿಡಿಯುವ ಅರ್ಥಹೀನ ಪ್ರಯತ್ನ ಮಾಡುತ್ತಾನೆ. ಅವನ ವರ್ತನೆ ಹೆಣದೊಡನೆ ಮಾತನಾಡುವಂತೆ ತೋರುವುದು, ದೇಹ-ಆತ್ಮಗಳ ಭಿನ್ನತೆಯಿಂದ ಉಂಟಾದ ನಿರ್ಜೀವತೆಯೇ ಆಗಿದೆ. ಒಂದರ್ಥ ಇನ್ನೊಂದು ಅರ್ಥವನ್ನು ಬೇರ್ಪಡಿಸಿ ಇಲ್ಲದಂತಾಗಿದೆ. ಈ ಎರಡೂ ಅರ್ಥಗಳೂ ಒಂದಾಗಿ ಅಖಂಡವಾಗುವ ಬದಲು, ಒಂದು ಇನ್ನೊಂದನ್ನು ಕೊಂದು ಪೂರ್ತಿಯಾಗಿ ಇಲ್ಲವಾಗುತ್ತದೆ. ಇದು ಕಾಳಿಂಗನನ್ನು ಕೊಂದು ತಾನೂ ಸಾಯುವ ಶಿವನಾಗದೇವನಿರಬಹುದು, ಅವಳಿ-ಜವಳಿಯಿರಬಹುದು. "ಶಿವನಾಗದೇವ ಎದುರಿಸುವ ದ್ವಂದ್ವ ತನ್ನ ಮೂಲಕ ಸ್ವರೂಪದಲ್ಲಿ ಆದರ್ಶ-ವಾಸ್ತವಗಳ, ದೇಹ ಮನಸ್ಸುಗಳ ದ್ವಂದ್ವ"[4]

ಇನ್ನು 'ಸಿರಿಸಂಪಿಗೆ' ಹೆಸರೇ ಅವಳ ಇಡೀ ವ್ಯಕ್ತಿತ್ವವನ್ನು ಕಟ್ಟಿಕೊಡುವಂತದ್ದು. ಶಾರೀರಿಕವಾಗಿ, ಮಾನಸಿಕವಾಗಿ ಅವಳಲ್ಲಿರುವ ಸಮೃದ್ಧಿ ಗಟ್ಟಿತನದ ಸಂಕೇತ ಅವಳ ಹೆಸರು, ನಾಟಕದ ಹೆಸರೇ ಸಿರಿಸಂಪಿಗೆಯಾದರೂ, ನಾಟಕದಲ್ಲಿ ಅವಳಿಗೆ ವ್ಯಕ್ತಿತ್ವವಿಲ್ಲ. ಅವಳ ಭಾವನೆಗಳೇನು? ಅವಳ ಮಾನಸಿಕ ಪ್ರಪಂಚವೆಂತಹದ್ದು ಎಂಬುದರ ಬಗ್ಗೆ ನಾಟಕ ಆಸಕ್ತಿ ವಹಿಸದಿದ್ದದ್ದು ಆಶ್ಚರ್ಯವೆನಿಸುತ್ತದೆ. ಅವಳ ಕತೆಯದ್ದೆ ಛಾಯೆಯಂತೆ ಕಮಲಳ ಬದುಕು ಕಂಡರೂ ಅದಕ್ಕೆ ಕಮಲಳ ಪ್ರತಿಕ್ರಿಯೆಯೇ ಬೇರೆ, ಸಿರಿಸಂಪಿಗೆಯ ಪ್ರತಿಕ್ರಿಯೆಯೇ ಬೇರೆ, ಪೂರ್ಣ-ಅಪೂರ್ಣಗಳ ಸಂಘರ್ಷ ಎದುರಿಸಿದ್ದು, ಅವರ ಗಂಡಂದಿರಾದರೂ, ಅದರ ದುರಂತ ಅನುಭವಿಸಿದ್ದು ಮಾತ್ರ ಹೆಂಡತಿಯರು. ಯಾವ ತಪ್ಪಿಲ್ಲದಿದ್ದರೂ ಕಮಲ ತನ್ನ ಗಂಡನ ಪ್ರೀತಿಯಿಂದ ವಂಚಿತಳಾಗುತ್ತಾಳೆ. ಅವಳ ಕಾಮ ಬಯಕೆ ತಾತ್ಕಾಲಿಕವಾಗಿ ತೀರಿತಾದರೂ, ಮುಂದೆ ಗಂಡನನ್ನೂ, ಸಂತಾನವನ್ನೂ ಏಕಕಾಲಕ್ಕೆ ಕಳೆದುಕೊಳ್ಳುತ್ತಾಳೆ. ತನ್ನ ಮೊಲೆಗಳನ್ನು ಅವಳಿಯ ಮೇಲೆ ಎಸೆದು ಕಾಡಿಗೆ ಓಡಿಹೋಗುವುದು, ತನ್ನ ಹೆಣ್ತನವನ್ನು ಅವಳು ಧಿಕ್ಕರಿಸುವ ಕ್ರಮವಾಗಿದೆ. ಆದರೆ ಸಿರಿಸಂಪಿಗೆಯಲ್ಲಿ ಈ ಪ್ರತಿಭಟನೆಯಿಲ್ಲ ಎಲ್ಲ ಸನ್ನಿವೇಶಗಳನ್ನು ಅನಿವಾರ್ಯವಾಗಿ, ಅಸಹಾಯಕವಾಗಿ ಒಪ್ಪಿಕೊಳ್ಳುತ್ತಾಳವಳು. ಅವಳು ತನ್ನ ದೇಹ ಬಯಸುವ ಕಾಮದ ಕರೆಗೆ ಓಗೊಟ್ಟಳಾದರೂ, ಕಾಳಿಂಗನನ್ನು ಅನೈತಿಕವಾಗಿ

ಸೇರಿದಳಾದರೂ, ಅವಳ ನಿಜವಾದ ನಿರೀಕ್ಷೆ ರಾಜಕುಮಾರನ ಪ್ರೀತಿ. ಅವಳಿಗೆ ಶಿವನಾಗದೇವನ ಪ್ರೀತಿ ಸಿಗಲಿಲ್ಲ. ಸಿಕ್ಕದ್ದು ಅವನ ದೇಹ–ಕಾಳಿಂಗ ಮಾತ್ರ.

"ಕಾಳಿಂಗ ಪರಪುರುಷ ಅಲ್ಲ ನಾಗದೇವನ ಒಂದು ಭಾಗ. ಸಿರಿಸಂಪಿಗೆಯನ್ನು ಅನುಭವಿಸುವ ಹಕ್ಕು ಅವನಿಗೂ ಇದೆ ಎಂಬ ಸಂಗತಿಯನ್ನು ನಾಟಕ ಸ್ಪಷ್ಟಪಡಿಸುತ್ತದೆ. ಆದ್ದರಿಂದ ಸಿರಿಸಂಪಿಗೆಯ ವ್ಯಭಿಚಾರ ಈ ನಾಟಕದ ಕೇಂದ್ರ ವಸ್ತುವಾಗಿಲ್ಲ."[5]

ಆದರೆ ಕಾಳಿಂಗ ಮಾತ್ರ ಅವಳಿಗಾಗಿ ತುಡಿಯುತ್ತಾನೆ. ಮಗುವನ್ನು ನೋಡಲು ಹಂಬಲಿಸುತ್ತಾನೆ. ನಾಟಕದ ಕೊನೆಯಲ್ಲಿ ಕಾಳಿಂಗನೊಡನೆ ನಡೆಯುವ ಸಿರಿಸಂಪಿಗೆಯ ಮಾತುಕತೆಗಳಲ್ಲಿ ಅವಳು ಅವನಿಂದ ವಿಮುಖಳಾಗುವಂತೆ ತೋರುತ್ತಾಳೆ. 'ನೀವು ಪ್ರೀತಿಯನ್ನು ತಿರಸ್ಕರಿಸಿರಬಹುದು. ಆದರೆ..... ನಿಮ್ಮನ್ನು ಸ್ವೀಕರಿಸಲಿಕ್ಕೆ ನನ್ನ ತೋಳುಗಳು ತೆರೆದುಕೊಂಡೇ ಇವೆಯಲ್ಲಾ' ಎಂದು ರಾಜಕುಮಾರನಿಗಾಗಿ ಕೈಚಾಚುತ್ತಾಳೆ. ರಾಜಕುಮಾರನೊಡನೆ ಅವಳಾಡುವ ಮಾತುಗಳು ಮಾತ್ರ ಅವಳ ಬದುಕಿನ ದುರಂತದ ದಿಟ್ಟ ಅಭಿವ್ಯಕ್ತಿ. "ನಾನಾಗಲೇ ಅರ್ಧ ವಿಧವೆ.... ನೀವು ಸೀಳಿಕೊಂಡಾಗ ನನ್ನನ್ನೂ ಸೀಳಿಬಿಟ್ಟರಿ.... ಒಂಟಿ ನಾನು..... ಸಿಕ್ಕೋರೆಲ್ಲ ಅರೆ ಮಾನವರು"[6]

ಇದು ರಾಜಕುಮಾರನ ವ್ಯಕ್ತಿತ್ವಕ್ಕೆ ಚಾಟಿ ಏಟು. ಬದುಕಿನ ಅರ್ಥವಂತಿಕೆ, ಪೂರ್ಣತೆ ಅವಳಿಗೆ ದೊರಕಿಲ್ಲ. ಅದು ದೊರಕುವುದು ದೇಹ – ಮನಸ್ಸು ಎರಡೂ ಒಂದಾದಾಗ. ಅಖಂಡವಾಗಿರುವ ತನ್ನನ್ನು ತಾನು ಸೀಳಿಕೊಳ್ಳುವ ಶಿವನಾಗ, ಏಕವಾದದ್ದನ್ನು ಚೂರು ಚೂರಾಗಿಸುತ್ತಾನೆ. ಕಾಳಿಂಗನಿಲ್ಲದೆ ರಾಜನಿಲ್ಲ. ರಾಜನಿಲ್ಲದೆ ಕಾಳಿಂಗನಿಲ್ಲ ಇಲ್ಲಿರುವುದು ಎರಡೇ ಆಯ್ಕೆ. ಬಿಂಬ – ಪ್ರತಿಬಿಂಬಗಳು, ಎರಡರ್ಧಗಳು ಒಂದಾಗಿ ಏಕವಾಗುವುದು ಇಲ್ಲವೇ ಇಲ್ಲವಾಗುವುದು. ಕಾಳಿಂಗನನ್ನು ಕೊಲ್ಲುವ ರಾಜಕುಮಾರ, ತಮ್ಮಿಬ್ಬರ ನಡುವಿನ ಭಿನ್ನತೆಯನ್ನು ತುಂಡರಿಸುತ್ತಾನೆ. ಅವರಿಬ್ಬರೂ ಬದುಕಿನಲ್ಲಿ ವೈರಿಗಳಾಗಿ ಸಾವಿನಲ್ಲಿ ಐಕ್ಯವಾಗಿ ಮುಕ್ತಿ ಪಡೆದಿದ್ದಾರೆ.

"ನಾಟಕದ ಪರಿಪೂರ್ಣ ಸತ್ವ ಜೀವದರ್ಶನ, ತಮ್ಮ ದೇಹ, ಮನಸ್ಸು, ಆತ್ಮಗಳ ಅನ್ವೇಷಣವನ್ನು ನಾಟಕದ ಪರಿಣಾಮಕಾರಿಯಾದ ಅಭಿವ್ಯಕ್ತಿಯಲ್ಲಿ ತೊಡಗಿಕೊಳ್ಳುತ್ತಲೇ ಬೆಳೆಯುವುದರಿಂದ 'ಸಿರಿಸಂಪಿಗೆ' ಸಶಕ್ತವೂ ಮಹತ್ವದ ಅನನ್ಯವಾದ ನಾಟಕವಾಗಿದೆ"[7]

ನಾಟಕ ಹಲವು ಸತ್ಯ ದರ್ಶನಗಳನ್ನು ಮಾಡಿಸುತ್ತದೆ. ದೇಹ–ಮನಸ್ಸುಗಳ ಅಭಿನ್ನತೆ, ಪರಿಪೂರ್ಣತೆಯ ಭ್ರಮೆ, ದೇಹ ಪರಿಶುದ್ಧವಾದುದು, ಆತ್ಮ ಕೊಳಕಾದದ್ದು, ಆತ್ಮಕ್ಕೆ ಪಾಪಗಳು ಕಾಣಿಸುತ್ತವೆ. 'ಸಿರಿಸಂಪಿಗೆ' ಬೌದ್ಧಿಕ, ಮಾನವಿಕ, ಆಧ್ಯಾತ್ಮಿಕ ಹೀಗೆ ಹಲವು ಸ್ತರಗಳಲ್ಲಿ ಚರ್ಚೆಗೆ ತೆರೆದುಕೊಳ್ಳುವ, ಜಿಜ್ಞಾಸೆಗೆ ಒಳಪಡಿಸುವ, ಕನ್ನಡ

ಸಾಹಿತ್ಯದಲ್ಲಿ ಬಹುಕಾಲ ಉಳಿಯಲಿರುವ ಶ್ರೇಷ್ಠ, ಯಶಸ್ವಿ ನಾಟಕವೆಂಬುದರಲ್ಲಿ ಸಂಶಯವಿಲ್ಲ.

**ಅಡಿ ಟಿಪ್ಪಣಿಗಳು:**

1. ಚಂದ್ರಶೇಖರ ಕಂಬಾರ, (1995), ಸಿರಿಸಂಪಿಗೆ, ಅಕ್ಷರ ಪ್ರಕಾಶನ, ಹೆಗ್ಗೋಡು, ಪು.ಸಂ. ಮುನ್ನುಡಿ.
2. ಜಯಪ್ರಕಾಶ ಮಾವಿನಕುಳಿ (ಸಂ.), (2004), ಶಿವಾಪುರ ಕಂಬಾರ, ಚಂದ್ರಶೇಖರ ಕಂಬಾರ ಅಭಿನಂದನಾ ಸಮಿತಿ, ಮುಡುಬಿದಿರೆ, ಪು.ಸಂ. 151
3. ಚಂದ್ರಶೇಖರ ಕಂಬಾರ, (1995), ಸಿರಿಸಂಪಿಗೆ, ಅಕ್ಷರ ಪ್ರಕಾಶನ, ಹೆಗ್ಗೋಡು, ಪು.ಸಂ. 82
4. ಆಮೂರ ಜಿ.ಎಸ್., ಸಾತ್ವಿಕ ಪಥ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ಪು.ಸಂ. 31
5. ಬಸವರಾಜ ಪಿ. ಡೋಣೂರ, (2008), ಕನ್ನಡ ನಾಟಕ ಮತ್ತು ವಾಸ್ತವತೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು.ಸಂ. 197
6. ಚಂದ್ರಶೇಖರ ಕಂಬಾರ, (1995), ಸಿರಿಸಂಪಿಗೆ, ಅಕ್ಷರ ಪ್ರಕಾಶನ, ಹೆಗ್ಗೋಡು, ಪು.ಸಂ. 73
7. ಜಯಪ್ರಕಾಶ ಮಾವಿನಕುಳಿ (ಸಂ.), (2004), ಶಿವಾಪುರ ಕಂಬಾರ, ಚಂದ್ರಶೇಖರ ಕಂಬಾರ ಅಭಿನಂದನಾ ಸಮಿತಿ, ಮುಡುಬಿದಿರೆ, ಪು.ಸಂ. 153

**ಪರಾಮರ್ಶನ ಗ್ರಂಥಗಳು:**


1. ಚಂದ್ರಶೇಖರ ಕಂಬಾರ, (1995), ಸಿರಿಸಂಪಿಗೆ, ಅಕ್ಷರ ಪ್ರಕಾಶನ, ಹೆಗ್ಗೋಡು.
2. ಆಮೂರ ಜಿ.ಎಸ್., ಸಾತ್ವಿಕ ಪಥ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.
3. ಜಯಪ್ರಕಾಶ ಮಾವಿನಕುಳಿ (ಸಂ.), (2004), ಶಿವಾಪುರ ಕಂಬಾರ, ಚಂದ್ರಶೇಖರ ಕಂಬಾರ ಅಭಿನಂದನಾ ಸಮಿತಿ, ಮುಡುಬಿದಿರೆ.
4. ನಾಯಕ ಹಾ.ಮ. (ಸಂ), ಪ್ರಧಾನ್ ಗುರುದತ್ತ (ಪ್ರ.ಸಂ.), (2006), ಚಂದ್ರಶೇಖರ ಕಂಬಾರ, ನವಕರ್ನಾಟಕ ಪ್ರಕಾಶನ, ಬೆಂಗಳೂರು.
5. ಆಮೂರ ಜಿ.ಎಸ್., (2007), ಸಮಾರಾಧನ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.
6. ಬಸವರಾಜ ಪಿ. ಡೋಣೂರ, (2008), ಕನ್ನಡ ನಾಟಕ ಮತ್ತು ವಾಸ್ತವತೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.



**Funding:**

This study was not funded by any grant.


**Conflict of interest:**

The Authors have no conflict of interest to declare that they are relevant to the content of this article.


**About the License:**

© The Authors 2024. The text of this article is open access and licensed under a Creative Commons Attribution 4.0 International License.